(2) ರಾಜ್ಯಪಾಲರ ಭಾಷಣದ ಮಂಡನೆ

ಅಧ್ಯಕ್ಷರು: ಸನ್ಮಾನ್ಯ ರಾಜ್ಯಪಾಲರು ಸಭೆಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ತಾವು, ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದೆ ಮಂಡನೆ ಮಾಡಿಸುವುದಕ್ಕೆ ಹೊರಟಿದ್ದೀರಿ. ಜನಾದೇಶವನ್ನು ಕಳೆದುಕೊಂಡಂಥ ಸರ್ಕಾರಕ್ಕೆ ರಾಜ್ಯಪಾಲರ ಭಾಷಣದ ಮೂಲಕ ನೀತಿ, ನಿರ್ಣಯಗಳನ್ನು ಮುಂದುವರಿಸುವಂಥ ಒಂದು ನೈತಿಕ ಹಕ್ಕಿಲ್ಲ. ಬೀದರ್, ಗುಲ್ಬರ್ಗಾದಲ್ಲಿ ತೊಗರಿಬೇಳೆ ಸಂಪೂರ್ಣ ನಾಶವಾಗಿ 10-12 ಜನ ತಮ್ಮ ಪ್ರಾಣವನ್ನು ಕಳೆದುಕೊಂಡಿರುವಂಥ ಈ ದುಸ್ಥಿತಿಯಲ್ಲಿರಬೇಕಾದರೆ ಈ ಸರ್ಕಾರ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನ ಮಾಡುತ್ತಿದೆ. ಮಾನ್ಯ ರಾಜ್ಯಪಾಲರು ಭಾಷಣ ಮಾಡುವಂಥ ಕಾಲದಲ್ಲಿ ಅಡ್ಡಿ ಮಾಡಬಾರದು ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ನಾವು ಸಮಾಧಾನದಿಂದ ಇದ್ದೆವು. ಬೀದರ್ ಗುಲ್ಬರ್ಗಾದಲ್ಲಿ ತೊಂದರೆಗೊಳಗಾದ ರೈತರಿಗೆ ಪರಿಹಾರವನ್ನು ಕೊಡುವುದಕ್ಕೆ ಯೋಗ್ಯತೆ ಇಲ್ಲದಿರತಕ್ಕಂಥ ಸರ್ಕಾರ, ಬೀದರ್‌ನಲ್ಲಿ ಹತ್ತಾರು ಜನ ರೈತರು ನೇಣು ಹಾಕಿಕೊಂಡಿದ್ದರೂ ಸಹ, ಅದರ ಕಡೆಗೆ ಗಮನಹರಿಸದೆ ಕಣ್ಣುಮುಚ್ಚಿಕೊಂಡು ಕುಳಿತಿರುವಂಥ ಈ ಸರ್ಕಾರಕ್ಕೆ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತೇನೆ.

ಕಾರ್ಯದರ್ಶಿ: ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುತ್ತೇನೆ. ★

(3) ಪ್ರಮಾಣ ವಚನ ಸ್ವೀಕಾರ

ಅಧ್ಯಕ್ಷರು: ಈಗ ಹೊಸದಾಗಿ ಆರಿಸಿಬಂದಂಥ ಮಾನ್ಯ ಸದಸ್ಯರುಗಳು ಪ್ರಮಾಣ ವಚನ ಸ್ವೀಕಾರ ಮಾಡುವುದು.

ಈ ಕೆಳಕಂಡ ಮಾನ್ಯ ಸದಸ್ಯರುಗಳು ಪ್ರತಿಜ್ಞಾ ವಚನ ಸ್ವೀಕಾರ ಮಾಡಿದರು.

1. ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ-ಕೊಟ್ಟೂರು ಕ್ಷೇತ್ರ.

2. ಶ್ರೀ ಎ.ನಾರಾಯಣಸ್ವಾಮಿ-ಅನೇಕಲ್ ಕ್ಷೇತ್ರ

★ ಅನುಬಂಧ (I)